

## ಕೃಪಾಕರ ಸೇನಾನಿ ಹೇಳಿದ ಪ್ರಸಂಗಗಳು

### ವಿಐಪಿ ಫೈರ್!

ಪರಿವೀಕ್ಷಣೆಗೆಂದು ಒಮ್ಮೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯೊಬ್ಬರು ಬಂಡೀಪುರಕ್ಕೆ ಬಂದಿದ್ದರು. ಅವರು ಆಗಮಿಸಿದ ಒಂದು ತಾಸಿನಲ್ಲಿ ವಸತಿಗೃಹಕ್ಕೆ ಮುಖ ಮಾಡಿದ ಕಾಡುಗಳಲ್ಲಿ ಬೆಂಕಿ ಕಾಣಿಸಿಕೊಂಡಿತು. ಕೆಲಸ ಮುಗಿದ ಬಳಿಕ ಅಧಿಕಾರಿಗಳು ಬೆಂಗಳೂರಿಗೆ ವಾಪಸಾದರು. ಆ ನಂತರ ಹೊಸದಾಗಿ ಎಲ್ಲೂ ಬೆಂಕಿ ಕಾಣಿಸಿಕೊಳ್ಳಲಿಲ್ಲ. 'ಇದೇನು ಹೀಗಾಯಿತಲ್ಲ. ಚಳಿಗಾಲದಲ್ಲಿ ಬೆಂಕಿ?' ಎಂದು ರೇಂಜರ್‌ಗೆ ಪ್ರಶ್ನಿಸಿದೆವು. 'ಅದು ವಿಐಪಿ ಫೈರ್' ಎಂಬ ಉತ್ತರ ಅವರಿಂದ ಬಂತು.

ಅಧಿಕಾರಿಗಳ ಬಗ್ಗೆ ಅಸಮಾಧಾನವಿರುವ ಸ್ಥಳೀಯರು, ಸಂದರ್ಭಗಳಿಗೆ ಕಾದು ಈ ಕೃತ್ಯ ಎಸಗುತ್ತಾರೆ. ಹಿರಿಯ ಅಧಿಕಾರಿಗಳು ಬಂದಾಗ ನಮ್ಮನ್ನು ಸಂಕಷ್ಟಕ್ಕೆ ಸಿಕ್ಕಿಸುವುದು ಅವರ ಉದ್ದೇಶವಾಗಿರುತ್ತದೆ ಎನ್ನುವುದು ರೇಂಜರ್ ಅವರು ಹೇಳಿದ 'ವಿಐಪಿ ಫೈರ್' ವಿಶೇಷಣದ ವಿಸ್ತರಣೆ. ಮುಂದೆ ಬಂಡೀಪುರದಲ್ಲಿ ಜರುಗಿದ ಹಲವಾರು ಘಟನೆಗಳು ವಿ.ಐ.ಪಿ. ಫೈರ್ ಪರಿಕಲ್ಪನೆಯನ್ನು ಪುಷ್ಟೀಕರಿಸಿದವು.

### ಸಾಂಬಾರ್ ಶಾರ್ಟೇಜ್ ಬೆಂಕಿ!

ಬಂಡೀಪುರದ ಕಾಡಿನ ನಡುವೆ ನಿರ್ದಿಷ್ಟ ಆಕಾರವಿಲ್ಲದ ಕಲ್ಲೊಂದಿತ್ತು. ವರ್ಷದಲ್ಲಿ ಯಾವುದೋ ಒಂದು ದಿನ ಏಳೆಂಟು ಮಂದಿ ಅಲ್ಲಿಗೆ ಆಗಮಿಸಿ ಹುಲ್ಲು, ಕಸಕಡ್ಡಿಗಳಿಂದ ಮುಚ್ಚಿಹೋಗಿದ್ದ ಆ ಕಲ್ಲನ್ನು ಸ್ವಚ್ಛಗೊಳಿಸಿ ಹಿಂದಿರುಗುತ್ತಿದ್ದರು. ಒಂದೆರಡು ವರ್ಷಗಳಲ್ಲಿ ಅದರ ಜೀರ್ಣೋದ್ಧಾರವಾಯಿತು. ದೇಗುಲ ತಲೆ ಎತ್ತಿತು. ಮಳೆ, ಗಾಳಿ, ಬಿಸಿಲಿನೊಂದಿಗೆ ಸಂವಾದಿಸಿಕೊಂಡಿದ್ದ ಕಲ್ಲು ದೇಗುಲದಲ್ಲಿ ಬಂದಿಯಾಯಿತು. ಕ್ರಮೇಣ ಆ ಕಲ್ಲು ಮಹಾಶಕ್ತಿಯ ದೇವರಾಯಿತು. ಹೊಸ ಹೊಸ ಆಚರಣೆಗಳು ಅಲ್ಲಿ ಆರಂಭಗೊಂಡವು. ಬರುವ ಭಕ್ತಾದಿಗಳಿಗೆ ಉಚಿತ ಊಟದ ವ್ಯವಸ್ಥೆ ಆರಂಭವಾಯಿತು.

ಈ ದೇವರ ಜಾತ್ರೆ ನಡು ಬೇಸಿಗೆಯಲ್ಲಿ ಜರುಗುತ್ತದೆ. ಪ್ರತಿ ಮೂರು ವರ್ಷಗಳಲ್ಲಿ ಒಮ್ಮೆಯಾದರೂ ಕೆರಳಿದ ಭಕ್ತಾದಿಗಳು ಕಾಡಿಗೆ ಬೆಂಕಿ ಹಚ್ಚುತ್ತಾರೆ. ಅದು ಕಾಡಿನ ಮೇಲಿನ ದ್ವೇಷಕ್ಕಲ್ಲ. ಕಡೆಯ ಪಂಕ್ತಿಯಲ್ಲಿ ಕುಳಿತವರಿಗೆ ಸಾಂಬಾರ್ ಸಾಕಾಗಲಿಲ್ಲವೆಂಬ ಕಾರಣಕ್ಕಾಗಿ!

